ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

# ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ. ಮೈಸೂರು.

ದೂರವಾಣಿ ಸಂಖ್ಯೆ:0821-2424079,ಫ್ಯಾಕ್ಸ್: 0821-249012

**ಸಂಖ್ಯೆ : MYSDC-EST2/VA(15)/2/2017** **ದಿನಾಂಕ: 30/01/2018**

## ಅಧಿಕೃತ ಜ್ಞಾಪನ

ವಿಷಯ: 2016-17 ನೇ ಸಾಲಿನಲ್ಲಿ ಗ್ರಾಮಲೆಕ್ಕಿಗರ ನೇಮಕಾತಿ ಸಂಬಂಧ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನೆ ಮಾಡುವ ಬಗ್ಗೆ

ಉಲ್ಲೇಖ:1) ಈ ಕಛೇರಿಯ ಅಧಿಸೂಚನೆ ಸಂಖ್ಯೆ ವಿಎ ಇ.ಎಸ್.ಟಿ 84/2016-17 ದಿನಾಂಕ: 06/12/2016

2) ಈ ಕಛೇರಿಯ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 27/01/2018

****

2016-17 ನೇ ಸಾಲಿನ ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖ (1) ರಂತೆ ಅಧಿಸೂಚನೆ ಹೊರಡಿಸಿ, ಅರ್ಹ ಅಭ್ಯರ್ಥಿಗಳ ಕೆಳಕಂಡಂತೆ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಉಲ್ಲೇಖ (2) ರಂತೆ ಪ್ರಕಟಿಸಲಾಗಿದೆ.

ಪ್ರಕಟಿಸಿರುವ ಅಂತಿಮ ಆಯ್ಕೆಪಟ್ಟಿಯಲ್ಲಿನ ಅಭ್ಯರ್ಥಿಗಳು ಮಾತ್ರ ಮೈಸೂರು ಜಿಲ್ಲೆಯ ಗ್ರಾಮಲೆಕ್ಕಿಗರ ನೇಮಕಾತಿ ಅರ್ಜಿ ಸಲ್ಲಿಸಿದ ಸಂಬಂಧ ಮೂಲ ದಾಖಲಾತಿ ಪರಿಶೀಲನೆ ವೇಳೆ ಹಾಜರುಪಡಿಸಿರುವ ಹಾಗೂ ನಿಗಧಿಪಡಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಈ ಕೆಳಕಂಡ ನಿಗಧಿಪಡಿಸಿದ ದಿನಾಂಕದಂದು ಕಛೇರಿ ವೇಳೆಯಲ್ಲಿ "ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು ಜಿಲ್ಲೆ, ಝಾನ್ಸಿಲಕ್ಷ್ಮೀಭಾಯಿ ರಸ್ತೆ, ಮೈಸೂರು" ಇಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಿ / ನೌಕರರ ಹಸ್ತ ಸಲ್ಲಿಸುವುದು. ನಿಗಧಿತ ದಿನಾಂಕದಂದು ನಿಗಧಿಪಡಿಸಿರುವ ಕಛೇರಿ ವೇಳೆಯಲ್ಲಿ ಹಾಜರಾಗದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ಅಂತಿಮ ಆಯ್ಕೆಪಟ್ಟಿಯಿಂದ ಕೈಬಿಡಲಾಗುವುದು.

| ಕ್ರ.ಸಂ | ಅಭ್ಯರ್ಥಿಗಳು ಆಯ್ಕೆಯಾದ ಮೀಸಲಾತಿ | ತಾತ್ಕಾಲಿಕ ಪರಿಶೀಲನಾ ಪಟ್ಟಿಯ ಕ್ರಮ ಸಂಖ್ಯೆ | ದಿನಾಂಕ |
|---|---|---|---|
| **1.** | ಸಾಮಾನ್ಯ ವರ್ಗ | **01 ರಿಂದ 50** | **06/02/2018 ( 10-00 AM to 5-30 PM)** |
| **2.** | ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಪ್ರವರ್ಗ 1, 2ಎ, 2ಬಿ, 3ಎ ಮತ್ತು 3ಬಿ | **50 ರಿಂದ 105** | **07/02/2018 ( 10-00 AM to 5-30 PM)** |

ಸದಸ್ಯ ಕಾರ್ಯದರ್ಶಿ
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ,
ಮತ್ತು ಅಪರ ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ಪ್ರತಿಯನ್ನು: ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ/ಕಳುಹಿಸಿದೆ.

1. ರಾಷ್ಟ್ರೀಯ ಸೂಚನಾ ವಿಜ್ಞಾನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸದರಿ ಅಧಿಕೃತ ಜ್ಞಾಪನ ಹಾಗೂ ಪಟ್ಟಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
2. ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು/ತಹಸೀಲ್ದಾರರುಗಳಿಗೆ ಕಳುಹಿಸುತ್ತಾ ಅಧಿಸೂಚನೆಯನ್ನು ಪ್ರಕಟಣಾ ಫಲಕದಲ್ಲಿ ಪ್ರಕಟಿಸಲು ತಿಳಿಸಿದೆ.

# ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ನೇಮಕಾತಿ 2016-17

**ಈ ಕೆಳಕಂಡ ಮೂಲ ದಾಖಲಾತಿ ಸಲ್ಲಿಸಬೇಕು**

| ಕ್ರ ಸಂ | ದಾಖಲಾತಿ |
|---|---|
| 01 | ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ<br>(ಕಡ್ಡಾಯವಾಗಿ ಹಾಜರುಪಡಿಸಬೇಕು) |
| 02 | ದ್ವಿತೀಯ ಪಿಯುಸಿ / ಸಿಬಿಎಸ್‌ಸಿ / ಐಸಿಎಸ್‌ಸಿ ಅಂಕಪಟ್ಟಿ<br>(ಕಡ್ಡಾಯವಾಗಿ ಹಾಜರುಪಡಿಸಬೇಕು) |
| 03 | ಅರ್ಜಿ ಶುಲ್ಕ ಪಾವತಿಸಿರುವ ಬಗ್ಗೆ ಬ್ಯಾಂಕ್ ಚಲನ್<br>(ಕಡ್ಡಾಯವಾಗಿ ಹಾಜರುಪಡಿಸಬೇಕು) |
| 04 | ಇತ್ತೀಚಿನ ಎರಡು ಪಾಸ್‌ಪೋರ್ಟ್ ಸೈಜ್ ಫೋಟೋ |
| 05 | ಸರ್ಕಾರಿ ಉದ್ಯೋಗದಲ್ಲಿದ್ದಲ್ಲಿ ನಿರಾಪೇಕ್ಷಣಾ ಪತ್ರ |
| 06 | ತಹಶೀಲ್ದಾರ್ ರವರಿಂದ ಪಡೆದ ಜಾತಿ ಮತ್ತು ಆದಾಯ ದೃಡೀಕರಣ ಪತ್ರ<br>(ಕ್ಲೈಂ ಮಾಡಿದ್ದಲ್ಲಿ ಹಾಜರುಪಡಿಸಬೇಕು) |
| 07 | ಸಕ್ಷಮ ಪ್ರಾಧಿಕಾರದಿಂದ ಪಡೆದ ಗ್ರಾಮೀಣ ದೃಡೀಕರಣ ಪತ್ರ<br>(ಕ್ಲೈಂ ಮಾಡಿದ್ದಲ್ಲಿ ಹಾಜರುಪಡಿಸಬೇಕು) |
| 08 | ಸಕ್ಷಮ ಪ್ರಾಧಿಕಾರದಿಂದ ಪಡೆದ ಕನ್ನಡ ಮಾಧ್ಯಮ ದೃಡೀಕರಣ ಪತ್ರ<br>(ಕ್ಲೈಂ ಮಾಡಿದ್ದಲ್ಲಿ ಹಾಜರುಪಡಿಸಬೇಕು) |
| 09 | ಸಕ್ಷಮ ಪ್ರಾಧಿಕಾರದಿಂದ ಪಡೆದ ಯೋಜನಾ ನಿರಾಶ್ರಿತರ ದೃಡೀಕರಣ ಪತ್ರ<br>(ಕ್ಲೈಂ ಮಾಡಿದ್ದಲ್ಲಿ ಹಾಜರುಪಡಿಸಬೇಕು) |
| 10 | ಸಕ್ಷಮ ಪ್ರಾಧಿಕಾರದಿಂದ ಪಡೆದ ಮಾಜಿ ಸೈನಿಕ ದೃಡೀಕರಣ ಪತ್ರ<br>(ಕಡ್ಡಾಯವಾಗಿ ಹಾಜರುಪಡಿಸಬೇಕು) |
| 11 | ಸಕ್ಷಮ ಪ್ರಾಧಿಕಾರದಿಂದ ಪಡೆದ ಅಂಗವಿಕಲ ದೃಡೀಕರಣ ಪತ್ರ (ಜಿಲ್ಲಾ ಸರ್ಜನ್‌ರವರಿಂದ ವೈದ್ಯಕೀಯ ದೃಡೀಕರಣ ಪತ್ರ)<br>(ಕ್ಲೈಂ ಮಾಡಿದ್ದಲ್ಲಿ ಹಾಜರುಪಡಿಸಬೇಕು) |
| 12 | ಈ ಕೆಳಗಿನ ಯಾವುದಾದರೂ ಒಂದನ್ನು ಹಾಜರುಪಡಿಸಬೇಕು<br>ಅ) ಆಧಾರ್ ದೃಡೀಕರಣ ಪತ್ರ<br>ಆ) ಮತದಾರರ ಗುರುತಿನ ಚೀಟಿ<br>ಇ) ಪಡಿತರ ಚೀಟಿ<br>ಈ) ವಿದ್ಯಾಸಂಸ್ಥೆಯಿಂದ ಪಡೆದ ಗುರುತಿನ ಚೀಟಿ |
| 13 | ಪತ್ರಾಂಕಿತ ಅಧಿಕಾರಿ ಅಥವಾ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ |
| 14 | ಇತರೆ ದಾಖಲಾತಿಗಳು (ಕಂಪ್ಯೂಟರ್ ತರಬೇತಿ ಹಾಗೂ ಇತರೆ ) |